

ಪ್ರಕಟಣ ಯೋಜನೆ ಹಾಕಿಕೊಂಡಿದೆ. ನಾವಡ ನೀನು ಕೂಡಿ ಅದನ್ನ ಮಾಡೋದು. ಸಮಯ ಸಮೀಪ ಅದ ನೋಡ.' ಎಂದಾಗ 'ಮೌನಂ ಸಮ್ಮತಿ ಲಕ್ಷಣಂ' ಎಂದು ಅವರ ಆದೇಶವನ್ನು ಸ್ವೀಕರಿಸಿ ನಡೆಸಿದವು. ಹಂಪಿ ಉತ್ಸವದ ಉದ್ಘಾಟನಾ ಸಮಾರಂಭದಲ್ಲಿ 'ಸಾವಿರ ಕೀರ್ತನೆಗಳು' ಬಿಡುಗಡೆಗೊಳ್ಳುವಾಗ ವೇದಿಕೆಯ ಬದಿಯಲ್ಲಿ ನಿಂತ ನಮ್ಮನ್ನು 'ನೀವಿಬ್ಬರೂ ಅಲ್ಲಿ ನಿಲ್ಲೋದಲ್ಲ' ಎಂದು ಕೈಹಿಡಿದು ವೇದಿಕೆಯ ಮುಂಭಾಗಕ್ಕೆ ಕರೆತಂದು ಅಂದಿನ ಮುಖ್ಯಮಂತ್ರಿ, ಮಾನ್ಯ ಎಸ್.ಎಂ.ಕೃಷ್ಣ ಅವರಿಗೆ ನಮ್ಮನ್ನು ಪರಿಚಯಿಸಿದರು. ಉತ್ಸವದ ಸಮಾರಂಭದ ಗಡಿಬಿಡಿ ಗದ್ದಲದ ನಡುವೆಯೂ ಕೆಲಸ ಮಾಡಿದವರ ಬಗ್ಗೆ ಕಲಬುರ್ಗಿ ಅವರು ಎಷ್ಟು ನಿಗಾ ಇಡುತ್ತಿದ್ದರು ಎನ್ನುವುದು ಅವರಲ್ಲಿ ಸ್ನೇಹ ಕರ್ತವ್ಯವಾಗುವ ಬಗೆ.

ಅದು 2000ನೇ ಇಸವಿ, ಕಲಬುರ್ಗಿಯವರು ಹಂಪಿ ವಿ.ವಿ. ಕುಲಪತಿಯಾಗಿದ್ದ ಕಾಲ. ನಮ್ಮ ಮಗಳು ಪ್ರಜ್ಞಾ ಎಂ.ಎ. ಅಂತಿಮ ವರ್ಷದ ವಿದ್ಯಾರ್ಥಿಯಾಗಿದ್ದಾಗಲೇ ನೆಟ್ ಪರೀಕ್ಷೆ ಬರೆದು ಜೆಆರ್‌ಎಫ್ ಫೆಲೋಶಿಪ್ ಪಡೆದು ಪಿಎಚ್.ಡಿ ಸಂಶೋಧನೆಯ ನೋಂದಣಿಗೆ ಅರ್ಹಳಾದಳು. ಫೋನು ಮಾಡಿ ಸುದ್ದಿ ತಿಳಿಸಿದಾಗ ಕಲಬುರ್ಗಿಯವರು ಒಬ್ಬ ತಂದೆಯಾಗಿ ಸಂಭ್ರಮಪಟ್ಟುದನ್ನು ಆ ದನಿಯಲ್ಲಿ ಕಂಡೆವು. 'ನೀ ನಮ್ಮ ವಿಶ್ವವಿದ್ಯಾಲಯದೊಳಗ ಪಿಎಚ್.ಡಿ ಮಾಡು ನಾನೇ ನಿನಗೆ ಮಾರ್ಗದರ್ಶಕ ಆಗಿರ್ತೀನಿ' ಅಂದರು. ಕಲಬುರ್ಗಿಯಂತಹ ದೊಡ್ಡ ಸಂಶೋಧಕರು ಮಾರ್ಗದರ್ಶಕರಾಗುವುದು ನಮ್ಮ ಯೋಗ ಅಂದುಕೊಂಡೆವು. ಆ ಅಭಿಮಾನವನ್ನು ಕಲಬುರ್ಗಿಯವರಲ್ಲೂ ಹೇಳಿಕೊಂಡೆ. 'ಸರ್ ನಾನು ನಿಮ್ಮ ಶಿಷ್ಯೆಯಾಗಿಲ್ಲ. ಮಗಳಿಗೆ ಆ 'ಗುರುಬಲ' ಬಂದಿದೆ. ಇದನ್ನೇ ಅಮೃತಘಳಿಗೆ ಎನ್ನುವುದು ಇದು ಸಂತೋಷದಲ್ಲಿ ಸಂತೋಷ ನಮಗೆಲ್ಲ' ಎಂದೆ. 'ಆಕಿ ಪ್ರತಿಭಾವಂತೆ ಇದ್ದಾಳೆ. ಜೆಆರ್‌ಎಫ್ ಆಗಿರೋದು ನಮ್ಮ ವಿ.ವಿ. ಗೂ ಹೆಮ್ಮೆ' ಎಂದು ಅದೇ ಅಭಿಮಾನದಿಂದ ಆಡಿದರು. ಪ್ರಜ್ಞಾ ರ‍್ಯಾಂಕ್‌ನೊಂದಿಗೆ ಎಂ.ಎ. ಪಾಸಾದಾಗ ಕನ್ನಡ ವಿ.ವಿ ಪಿಎಚ್.ಡಿಗೆ ಅರ್ಜಿ ಕರೆದಿತ್ತು. ಆಗ ಮತ್ತೆ ಕಲಬುರ್ಗಿಯವರು ಪ್ರಜ್ಞಾಗೆ ಫೋನ್ ಮಾಡಿ ಕನ್ನಡ ವಿ.ವಿ. 'ಪಿಎಚ್.ಡಿಗೆ ಅರ್ಜಿ ಆಹ್ವಾನಿಸಿದೆ. ನೀನು ಅರ್ಜಿ ಹಾಕು, ನಾನೇ ನಿನ್ನ ಗೈಡ್ ಆಗರ್ತೀನಿ' ಎಂದು ಸಂಶೋಧನೆಯ ವಿಷಯದ ಬಗೆಗೂ ಚರ್ಚೆ ಮಾಡಿದರು.

ಕಾರಣಾಂತರದಿಂದ ಅದೇ ವರ್ಷ ಪ್ರಜ್ಞಾ ಮಂಗಳೂರುವಿ.ವಿಯಲ್ಲಿನೇರನೋಂದಾವಣೆಗೊಂಡು